ದಪ್ಪ ತುಟಿಯನ್ನು ಪೊದೆಮೀಸೆ ಯರ್‍ರಾಬಿರ್‍ರಿ ಆವರಿಸಿಕೊಂಡಿರುತ್ತಿತ್ತು. ಕೆನ್ನೆ ಕುತ್ತಿಗೆಯ ಮೇಲೆಲ್ಲ ಸುರುಳಿಗಟ್ಟಿದ ರೋಮ. ಕುತ್ತಿಗೆಯಲ್ಲಿ ಹಾಕಿದ ಬೆರಳುಗಾತ್ರದ ಹಗ್ಗದಂತಹ ಬಂಗಾರದ ಚೈನು, ಎರಡೂ ಕೈಯ ಮೂರು ಬೆರಳುಗಳಿಗೆ ಸದಾ ಹಾಕಿರುವ ಹರಳುಂಗುರಗಳು. ಅವನ ಕಪ್ಪು ಮೈಬಣ್ಣದ ಹಿನ್ನೆಲೆಯಲ್ಲಿ ಹಳದಿಬಣ್ಣ ಎದ್ದು, ಆಭರಣದ ಜಾಹೀರಾತಿನಂತೆ ಕಾಣುತ್ತಿತ್ತು. ಸೋನುಲತಾ ಸುಮಾರು ನಲವತ್ತರ ಪ್ರಾಯದವರಾದರೂ ಮಧ್ಯವಯಸ್ಸು ದಾಟಿದಂತೆ ಕಾಣುತ್ತಿದ್ದಳು. ಬಿಳಿಯ ಮೈಬಣ್ಣ ಈಗಿನ ಜೋಲುಬಿದ್ದ ಚರ್ಮದಲ್ಲೂ ಗೊತ್ತಾಗುತ್ತಿತ್ತು.

ಅವಳು ತೆಲುಗು, ತಮಿಳು ಅಲ್ಲದೆ ಎರಡು ಮೂರು ಕನ್ನಡ ಸಿನಿಮಾದಲ್ಲೂ ನಟಿಸಿದ್ದಳು. ಹಿಂದಿಯಲ್ಲಿ ನಾಯಕಿಯ ಸ್ನೇಹಿತೆಯಾಗಿ, ಹೀರೊನ ತಂಗಿಯಾಗಿ, ಹೀಗೆ ಅಷ್ಟು ಪ್ರಾಮುಖ್ಯತೆಯಿಲ್ಲದ ಪಾತ್ರಗಳಲ್ಲಿ ನಟಿಸುತ್ತಾ ನಾಯಕಿಯಾಗಲು ಏನೆಲ್ಲ ಕಸರತ್ತು ತಂತ್ರಗಳನ್ನು ಮಾಡುತ್ತಲೆ ಇದ್ದಳು. ಆದರೆ ಅದು ಈಡೇರಿರಲಿಲ್ಲ. ದಕ್ಷಿಣಕ್ಕೆ ಬಂದಳು. ಇದಲ್ಲದೆ ಬೇರೇನು ಈಗ ಮಾಡುವ ಸ್ಥಿತಿಯಲ್ಲಿಲ್ಲದ್ದಕ್ಕೆ, ಬಂದ ಯಾವುದೇ ಪಾತ್ರವನ್ನಾದರೂ ಒಪ್ಪಿಕೊಳ್ಳಲೇಬೇಕಾಗಿತ್ತು. ಕೆಲವು ಸಾರಿ, ನಾಯಕಿ ನೃತ್ಯ ಮಾಡುವಾಗ ಸುತ್ತಲಿರುವ ಹತ್ತು ಜನರಲ್ಲಿ ಒಬ್ಬಳಾಗಿ ಸಹ ಇರಬೇಕಿತ್ತು. ಗಳಿಸದೆ ಊಟವಿಲ್ಲ. ಹೀಗಾದರೂ ಚಾಲ್ತಿಯಲ್ಲಿರಬೇಕು, ಇಲ್ಲವಾದರೆ ಉದ್ಯಮಕ್ಕೆ ನೆನಪೇ ಇರುವುದಿಲ್ಲ ಅನ್ನುವ ಆತಂಕ! ಏನೆಲ್ಲ ಹೇಗೆಲ್ಲ ಬಳಸಿಕೊಳ್ಳುತ್ತದೆ ಸಮಾಜ ಒಬ್ಬರ ಅನಿವಾರ್ಯತೆಯನ್ನ, ಅಸಹಾಯಕತೆಯನ್ನ ಅನ್ನುವ ಕೊರಗಿದ್ದರು, ಪರಿಚಯದವರಿಗೆ ತನ್ನಲ್ಲಿ ಕಾಣುವ ಸಣ್ಣ ಗ್ಲಾಮರ್ ಅವಳಿಗೆ ಒಂದು ಹಮ್ಮು ಬೆಳೆಸಿ, ಅದಕ್ಕಂಟಿಯೆ ಇರುವ ಸ್ಥೈರ್ಯ ತುಂಬುತ್ತಿತ್ತು.

ಶಾಣಪ್ಪನಿಗೆ ವಿಜಯವಾಡದ ಡಿಸ್ಟ್ರಿಬ್ಯೂಟರು ಆಪ್ತರು. ಒಂದು ಚಿತ್ರಕ್ಕೆ ಪಾಲುದಾರನಾಗಿ ಹಣ ಹಾಕಿದ್ದ. ನಿರ್ಮಾಪಕರು ಏರ್ಪಡಿಸಿದ ಪಾರ್ಟಿಗೆ ಆಹ್ವಾನಿತನಾಗಿ ಹೋಗಿದ್ದ. ಅನೇಕ ಸಿನಿಮಾ ಮಂದಿ ಅಲ್ಲಿದ್ದರು. ಕಾಕ್‌ಟೇಲ್ ಕುಡಿದು ಸಂಭ್ರಮಿಸುವ ಹೊತ್ತಿನಲ್ಲಿ ಅವಳನ್ನು ನಟಿ ಅಂತ ಪರಿಚಯಿಸಿದ್ದರು. ಅವಳಿಗಾಗ ಮೂವತ್ತೋ ಮೂವತ್ತೈದೊ. ನಾಯಕಿಯಾಗುವ ಸಂಧಿ ಬಂದೀತು ಅನ್ನುವ ಮಹಾತ್ವಾಕಾಂಕ್ಷೆಯಿದ್ದುದಕ್ಕೆ, ಬೊಜ್ಜು ಸೇರದಂತೆ ಕಾಳಜಿ ವಹಿಸುತ್ತಿದ್ದಳು. ಸೆಕ್ಸಿ ಅನಿಸಲು ಶರೀರದಲ್ಲಿ ಎಲ್ಲೆಲ್ಲಿ ಸೇರಿಸಿ, ಎಲ್ಲೆಲ್ಲಿ ಎಳೆಯಬೇಕು ಅಂತೆಲ್ಲ ಪ್ರಯೋಗ ಮಾಡುತ್ತಿದ್ದವಳಿಗೆ ಉಡುಪು ಧರಿಸುವ ಕಲೆ ಕರಗತವಾಗಿತ್ತು. ಶಾಣಪ್ಪನವರು ಮುಂದೆ ಸ್ವತಃ ನಿರ್ಮಾಪಕರಾದಾರು ಅನ್ನುವ ಊಹೆಯಲ್ಲಿ ಅವರೊಂದಿಗೆ ಚೆನ್ನಾಗಿ ಮಾತಾಡಿ ಜೊತೆ ನೀಡಿದ್ದಳು. ಕುಡಿಯುತ್ತ, ಕುಡಿಸುತ್ತ ಮಧ್ಯರಾತ್ರಿ ಮೀರಿ ನಡೆದ ಪಾರ್ಟಿಯಲ್ಲಿ ಅವಳು ಆಪ್ತಳಾದಳು. ಶಾಣಪ್ಪನ ವ್ಯವಹಾರದಾಳ, ಅವನ ಸಂಪತ್ತಿನ ಅಂದಾಜು ಸಿಕ್ಕಿದ್ದಕ್ಕೆ ಆ ಪರಿಚಯ ಮುಂದುವರಿಯಿತು. ತಾನೇ ಸಿನಿಮಾ ಮಾಡುತ್ತೇನೆ ಅಂತ ಅವಳಿಗೆ ಮಾತು ಕೊಟ್ಟ ಒಂದು ಮಬ್ಬು ಬೆಳಕಿನ ಅಂತಹ ಸಂದರ್ಭದಲ್ಲಿ. ಸಲೀಸಾಗಿ ಗೆಳೆತನ ಗಾಢವಾಗಿತ್ತು. ಎರಡು ವರ್ಷ ಹೀಗೆ ಮುಂದುವರಿದು, ಒಂದು ಸಂಜೆ ಅವಳನ್ನು ಮದುವೆಯಾಗು ಅಂತ ಕೇಳಿದ. ಅವಳಿಗೂ ಅನಿಶ್ಚಿತ ಭವಿಷ್ಯದ ಭಯದಿಂದ ಹೊರಬರಬೇಕಾಗಿತ್ತೇನೊ. ಶ್ರೀಮಂತನ ಜೊತೆ ಮದುವೆಗೆ ಒಪ್ಪಿದಳು. ಮದುವೆ ನಡೆದು ಈ ಮನೆಗೆ ಬಂದಳು.

'ನಿಂಗೇನ್ ಕಮ್ಮಿ ಮಾಡೀನಿ ಹೇಳ ಭೋಸುಡೀ, ತಾಕತ್ತದ ಆಗೀನಿ. ನೀಯೇನ ಕಡತಾ ತಡಕಂಡ್ ಮಲಗಾ ಅವಶ್ಶಿಲ್ಲ. ನಾ ಅಲ್ಲು ಬರ್ತೇನಿ... ಅಷ್ಟ ಕಸುವದ!' ಮೊದಲರಾತ್ರಿ ಕಳೆದ ಬೆಳಗ್ಗೆನೆ ಶಾಣಪ್ಪನ ಅರಚಾಟದ ದನಿ ಕೇಳಿ ಎಚ್ಚರಾದವಳಿಗೆ ಹೊರಗೆ ನಾಕಾರು ಜನ ಜಗಳವಾಡುತ್ತಿದ್ದುದು ಗೋಚರಿಸಿತ್ತು. ಇಬ್ಬರು ಹೆಂಗಸರು ಮೂವರು ಗಂಡಸರು ಜಗುಲಿಯಲ್ಲಿದ್ದರು. ರಸ್ತೆಯಲ್ಲಿ ನಾಕಾರು ಜನ ಕಾಯುತ್ತ ನಿಂತಿದ್ದರು. ಒಬ್ಬಳು, ಸೋನುಲತಾ ಕಡೆಗೊಮ್ಮೆ ಇವನನ್ನೊಮ್ಮೆ ನೋಡುತ್ತಾ 'ಯಾಕಾ... ಬಿಳೀ ಮೂತಿ ಕಂಡಂವ್ ಆಶಿಬಿದ್ದು ಕರಕಾ ಬಂದ್ಯನು ಬಾದ್ದುರಾ? ಹಂದಿ ಹಪಲೆ ಮ್ಯಾಲಬೀಳ ನಿನ ಸಂಗತೀಲೆ ಏಟು ದಿನಾ ಇರತಾಳ ಇಕಿ? ಓಡಿ ಹೊಕ್ಕಾಳ!... ನೀ ಅಲ್ಲಿ ಹುಟ್ಸಿಟ್ಟಿಯಲಾ ಆ ಮಕ್ಳೀಗಿ ಏನಿಲ್ದಾಂಗ್ ಮಾಡತೀಯನು ಅಂತ ನಮ್ಮ ಚಿಂತಿ. ಪಕ್ದಾಗ ನೀ ಮಕ್ಕಂಡಿಲ್ಲ ಅಂತೇನ ಅಳಾಕ್ಹತ್ತಿಲ್ಲೋ ಸುಂದ್ರಾ. ನಿನ್ ಸೂರತನ ನಂಗೊತ್ತಿಲ್ಲನ?'

ಇಬ್ಬರೂ ಕಪ್ಪಗಿದ್ದರು. ಮೈಯಲ್ಲಿ ಕಸುವಿರುವವರಾಗಿ ಆರೋಗ್ಯವಂತರಾಗಿದ್ದರು. ಒಬ್ಬಳು ಎತ್ತರವಾಗಿದ್ದಳು. ಕುಳ್ಳಗಿನವಳು ಅವಳಿಗಿಂತ ಕರಿಯಳಾಗಿದ್ದಳು. 'ಯಾಕಾ? ಭಾಳ ಬಾಯಿ ಮಾಡಕತೀರಲ... ನಿಮ್ಗೇನ್ ಕಮ್ಮೀ ಮಾಡೀನಿ ನಾ ಹೇಳ್ರಲಾ ಭೋಸುಡ್ಯಾರ? ಮೂವರಲ್ಲ ಇನಾ ಹತ್ತ್ ಹೆಣ್ಣುಗೋಳಿಗ್ ಆಗೋಷ್ಟು ಆಸ್ತಿ ಮಾಡೀನಿನಾ. ನಿಮ್ಮಿಮ್ಮ ಹೆಸ್ರಿಗೇ ಹಚತೇನಿ ಎಲ್ಲಾ. ಈಗ ಹೋಗ್ರಿ' ಗದ್ದರಿಸಿದ. 'ನೋಡಾಮ, ಅದೇನ ಮಾಡತಿ... ತಮಾಷಿ ಅಂತ ಮಾತ್ರ ಅನಕಾಬ್ಯಾಡ' ಎಚ್ಚರಿಸಿದಳು ಮತ್ತೊಬ್ಬಳು. ಹೆಂಗಸರು ಬಾಯಿ ಮಾಡುತ್ತಿದ್ದರೆ ಗಂಡಸರು ಸುಮ್ಮನೆ ದುರುಗುಟ್ಟಿ ನೋಡುತ್ತ ನಿಂತಿದ್ದರು. ಅವರ ರಕ್ತಸಂಬಂಧಿಗಳಿರಬಹುದು. ಅರ್ಧ ತಾಸು ಜಗಳಾಡಿದ ಮೇಲೆ ಎಲ್ಲಾ ಹೊರಟುಹೋದರು.

## ಸೋನುಲತಾಗೆ ಶಾಕ್!

ಸೋನುಲತಾಗೆ ಆಕಾಶ ಕಳಚಿಬಿದ್ದಂತಾಗಿತ್ತು. ಶಾಣಪ್ಪನಿಗೆ ಈಗಾಗಲೇ ಎರಡು ಮದುವೆಯಾಗಿರುವ ಸಾಧ್ಯತೆಯನ್ನವಳು ಊಹಿಸಿರಲೇ ಇಲ್ಲ. ಜೀವನದಲ್ಲಿ ಹೀಗಾದರು ಒಂದು ದಡ ಹತ್ತಿದೆ ಅನ್ನುವ ಸಮಾಧಾನದಲ್ಲಿದ್ದವಳಿಗೆ ನಡುಹೊಳೆಯಲ್ಲಿ ಬಿದ್ದಿರುವ ಅರಿವಾಗಿತ್ತು. ಒಳಗೆ ಮಂಚದ ಮೇಲೆ ಕುಳಿತವಳಿಗೆ ಅಳು ತಡೆಯಲಾಗಲಿಲ್ಲ. ಒಳಬಂದ ಶಾಣಪ್ಪ, ಹುಟ್ಟಾ ಬಂದ ರೂಢಿಯಲ್ಲಿ 'ಇಲ್ಯಾರು ಸತ್ತಾರಂತ ಈಗ ಅಳಾಕ್ಹತ್ತೀಯೆ ರಂ...' ಅನ್ನ ಹೊರಟವ, ಅವಳು ತನ್ನ ಹೊಸ ವಧು ಅನ್ನುವುದು ಅರಿವಾದ್ದಕ್ಕೊ ಅಥವಾ ಹಿಂದಿನ ರಾತ್ರಿಯ ಸವಿನೆನಪು ಅಷ್ಟಿಷ್ಟು ಉಳಿದುದಕ್ಕೊ ಕೊನೆಯ ಶಬ್ದವನ್ನು ತಡೆಹಿಡಿದ. '...ಅಳಬ್ಯಾಡಲೇ ನಿಂಗ್ ನಾನದೀನಿ' ಅಂತ ತಗ್ಗಿದ ದನಿಯಲ್ಲಿ ಹೇಳಿ ಹೊರಹೋದ. ಅದಾಗಿ ವಾರದಲ್ಲಿ ಆ ಮನೆ ಮತ್ತು ಅಲ್ಲಿಗೆ ಎರಡು ಕಿಲೋಮೀಟರು ದೂರವಿರುವ ತೋಟವನ್ನು ಅವಳ ಹೆಸರಿಗೆ ಮಾಡಿ ಕಾಗದಪತ್ರಗಳನ್ನೂ ಅವಳಿಗೆ ಕೊಟ್ಟ. ಅವನಿಗೆ ಹಾಗೆ ಎಷ್ಟೊ ಸಂಬಂಧಗಳಿರುವುದು ಅವಳಿಗೆ ಗೊತ್ತಾಗಿತ್ತು. ಮಠದಯ್ಯ ಪರಿಚಯ ಮಾಡಿಸಿದ ಕಮಲಮ್ಮ ಮತ್ತವಳ ಮಗಳನ್ನು ಕರೆತಂದು ಸೋನುಲತಾಳ ಕೆಲಸಕ್ಕೆ ನೇಮಿಸಿದ ಶಾಣಪ್ಪ ಮೊದಲಿದ್ದ ಕೆಲಸದವಳನ್ನು ತೋಟಕ್ಕೆ ಕಳಿಸಿಬಿಟ್ಟ.

***

ಒಂದು ತಿಂಗಳಲ್ಲಿ ಕಮಲಮ್ಮನಿಗೆ ಕೆಲಸ ದಿನಚರಿಯಂತಾಗಿ ಹೊಂದಿಕೊಂಡಿದ್ದಳು. ಯಜಮಾನರ ಕತೆ ಗೊತ್ತಾಗುತ್ತ ಹೋಗಿತ್ತು. ಆದರೆ ಎಷ್ಟು ಕಮ್ಮಿ ಬಾಯಿ ತೆರೆದರೆ ಅಷ್ಟು ಸುರಕ್ಷತೆ ಅನ್ನುವುದನ್ನು ಕಲಿತಿದ್ದಳು. ಮಗಳು ಮದನಾಂಬಾಳನ್ನು ಸ್ವಲ್ಪ ದೂರವಿದ್ದ ಸರಕಾರಿ ಶಾಲೆಗೆ ಸೋನುಲತಾಳನ್ನು ಕೇಳಿ ಸೇರಿಸಿದಳು. ಶುರುವಿನಲ್ಲಿ ರಾತ್ರಿಯಾದರು, ದಿನಾ ಶಾಣಪ್ಪ ಮನೆಗೆ ಬರುತ್ತಿದ್ದ. ಬಂದ ಮೇಲೆ ಬಾಟಲಿ ತೆರೆದು ಹೆಂಡತಿಯನ್ನೂ ಕರೆಯುತ್ತಿದ್ದ. ಆಮೇಲೆ ಕಟ್ಟಿಸಿಕೊಂಡು ಬಂದ ಚಿಕನ್ ಮಟನ್ ಪದಾರ್ಥಗಳನ್ನು ತೆರೆದು ಇಬ್ಬರ ಪಾರ್ಟಿ ನಡೆಯುತ್ತಿತ್ತು. ನಂತರ ಇಬ್ಬರಿಗೂ ಊಟ ಬಡಿಸಿ, ಪಾತ್ರೆಯೆಲ್ಲ ತೆಗೆದಿಟ್ಟು ಕಮಲಮ್ಮ ಮಲಗುತ್ತಿದ್ದಳು. ಅವರ ಕೋಣೆಯಿಂದ ಏನೇನೊ ಉದ್ಗಾರಗಳು, ಚೀತ್ಕಾರ, ಹುಸ್ ಅನ್ನುವ ಶಬ್ದ, ಕೆಲವೊಮ್ಮೆ ಅಶ್ಲೀಲ ಮಾತುಗಳು ನಿರಾತಂಕವಾಗಿ ಬರುತ್ತಿತ್ತು. ಅಡಿಗೆಮನೆ ಪಕ್ಕದ ಕಮಲಮ್ಮನ ಕೋಣೆವರೆಗೂ ಕೇಳುತ್ತಿತ್ತು. ಒಮ್ಮೊಮ್ಮೆ ಇದು


ಚಿತ್ರ: ವಿಜಯ

### ನಪಾಸು

ನಿರೀಕ್ಷೆಗಳನ್ನು ಬಿಡುವ
ಪರೀಕ್ಷೆಯಲ್ಲಿ
ನಪಾಸಾಗಿದ್ದೇನೆ
ನಾನು!

■ ಎಂ. ದತ್ತಾತ್ರೇಯ